ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 108-115
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಶರಣರ ದಾಂಪತ್ಯ ಭಾವ

**ಡಾ. ಮಹದೇವಪ್ರಸಾದ್ ಎನ್.ಎಸ್**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು

***Abstract:***
*ಶರಣರ ವಚನ ಸಾಹಿತ್ಯದಲ್ಲಿ ದಾಂಪತ್ಯ ಭಾವವು ಕೇವಲ ಗಂಡ–ಹೆಂಡತಿಯ ಸಂಬಂಧಕ್ಕೆ ಸೀಮಿತವಾಗದೆ, ಜೀವಾತ್ಮ ಮತ್ತು ಪರಮಾತ್ಮರ ನಡುವಿನ ಆಧ್ಯಾತ್ಮಿಕ ಐಕ್ಯತೆಯ ಸಂಕೇತವಾಗಿ ವ್ಯಕ್ತವಾಗುತ್ತದೆ. ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು ಹಾಗೂ ಇತರ ಶರಣರು ದಾಂಪತ್ಯವನ್ನು ಭಕ್ತಿ, ಸಮರ್ಪಣೆ, ಪ್ರೀತಿ ಮತ್ತು ಆತ್ಮಾನುಭವದ ರೂಪಕವಾಗಿ ನಿರೂಪಿಸಿದ್ದಾರೆ. ಶರಣರ ದಾಂಪತ್ಯ ಭಾವವು ಸಮಾನತೆ, ಪರಸ್ಪರ ಗೌರವ ಮತ್ತು ನೈತಿಕ ಜೀವನ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ. ಈ ಲೇಖನವು ಶರಣರ ವಚನಗಳಲ್ಲಿ ದಾಂಪತ್ಯದ ತಾತ್ವಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಆಯಾಮಗಳನ್ನು ವಿಶ್ಲೇಷಿಸುತ್ತದೆ. ದಾಂಪತ್ಯ ಸಂಬಂಧವನ್ನು ಲೌಕಿಕ ಜೀವನದ ಆದರ್ಶದೊಂದಿಗೆ ಆಧ್ಯಾತ್ಮಿಕ ಸಾಧನೆಯ ಮಾರ್ಗವಾಗಿಯೂ ಶರಣರು ಚಿತ್ರಿಸಿದ್ದಾರೆ. ಶರಣರ ಚಿಂತನೆಗಳು ಕುಟುಂಬ ಜೀವನದಲ್ಲಿ ಸಮಾನತೆ, ನಿಷ್ಠೆ ಮತ್ತು ಮಾನವೀಯ ಸಂಬಂಧಗಳ ಮಹತ್ವವನ್ನು ಸಾರುತ್ತವೆ. ಆದ್ದರಿಂದ ಶರಣರ ದಾಂಪತ್ಯ ಭಾವವು ಇಂದಿನ ಸಮಾಜಕ್ಕೂ ಮೌಲ್ಯಾಧಾರಿತ ಜೀವನದ ಮಾರ್ಗದರ್ಶಕ ತತ್ವವಾಗಿ ಪ್ರಸ್ತುತವಾಗಿದೆ.*

***Keywords:*** *ಶರಣರು, ದಾಂಪತ್ಯ ಭಾವ, ವಚನ ಸಾಹಿತ್ಯ, ಆಧ್ಯಾತ್ಮಿಕತೆ, ಸಮಾನತೆ ಮತ್ತು ಭಕ್ತಿ.*

## ಪೀಠಿಕೆ

ಕನ್ನಡ ನೆಲದ ಇತಿಹಾಸದಲ್ಲಿ ಧಾರ್ಮಿಕ ಸಾಮಾಜಿಕ ಮತ್ತು ಸಾಹಿತ್ಯಿಕ ಚಳುವಳಿ ನಡೆದ ಕಾಲ ಹನ್ನೆರಡನೆಯ ಶತಮಾನ, ಈ ಆಂದೋಲನದ ನಾಯಕ ಬಸವಣ್ಣನವರು. ಈ ಆಂದೋಲನಕ್ಕೆ ಬಸವಣ್ಣ ತಮ್ಮ ಕುಟುಂಬವಷ್ಟೆ ಅಲ್ಲದೇ ಸಮಾಜದ ವಿವಿಧ ಸ್ತರಗಳಿಂದ ಬಂದ ಜನ ಸಮುದಾಯವನ್ನು ಭಾಗಿಯಾಗಿಸಿ ಅದಕ್ಕೆ ಬಹುದೊಡ್ಡ ಸಾಮೂದಾಯಿಕ ಸ್ವರೂಪ ಕೊಟ್ಟರು ಹೀಗೆ ಸಮಾಜದ ಎಲ್ಲ ವರ್ಗ ಎಲ್ಲ ವರ್ಣಗಳ ಜನಸಮುದಾಯದ ಶಿವಶರಣರಿಂದ ಸೃಷ್ಟಿಯಾದಂತಹ ವಚನ ಸಾಹಿತ್ಯವು ಹಲವು ಜೀವನ ಮೌಲ್ಯಗಳ ಭಂಡಾರವಾಗಿದೆ

ವಚನ ಸಾಹಿತ್ಯದಲ್ಲಿ ದಾಂಪತ್ಯ ಜೀವನಕ್ಕೆ (ವೈವಾಹಿಕ ಜೀವನ) ಅತ್ಯಂತ ಉನ್ನತ ಮತ್ತು ಪವಿತ್ರವಾದ ಸ್ಥಾನವನ್ನು ನೀಡಲಾಗಿದೆ. ಶರಣ ಧರ್ಮದಲ್ಲಿ ಸಂಸಾರ ತ್ಯಾಜ್ಯವಲ್ಲ ಸನ್ಯಾಸ ಶ್ರೇಷ್ಠವಲ್ಲ ನೈಸರ್ಗಿಕವಾದ ಇಂದ್ರಿಯ ಸುಖವನ್ನು ಸಾತ್ವಿಕವಾಗಿ ಅನುಭವಿಸುವುದೇ ಪರಿಪೂರ್ಣ ಬದುಕಿನ ಲಕ್ಷಣ ಅದು ವ್ಯಕ್ತಿಯ ಸಾಧನೆ ಸಿದ್ದಿಗಳಿಗೆ ಆತಂಕಕಾರಿಯಲ್ಲ ಪ್ರತಿಯಾಗಿ ಅವುಗಳಿಗೆ ಹೋಗಿ ಮೋಕ್ಷ ಪಡೆಯಬೇಕಾಗಿಲ್ಲ ಬದಲಿಗೆ ಸಂಸಾರದಲ್ಲಿದ್ದುಕೊಂಡು ಶಿವನನ್ನು ಪ್ರತಿಪಾದಿಸಿದರು. ದಾಂಪತ್ಯ ಧರ್ಮವೇ ಶೇಷ್ಠವೆಂದು ಸಾರಿದ ಶರಣರು ತಾವು

***Please cite this article as:*** ಮಹದೇವಪ್ರಸಾದ್, ಎನ್.ಎಸ್. (2026). ಶರಣರ ದಾಂಪತ್ಯ ಭಾವ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 5(3), 108–115

ಸಂಸಾರಿಗಳಾಗಿ ಆದರ್ಶ ದಾಂಪತ್ಯ ಜೀವನ ನಡೆಸಿ ಸತಿಪತಿಗಳಿಬ್ಬರೂ ಸಿದ್ದಿಯ ಶಿಖರವನ್ನೇರಿ ನಿಂತರು.

ಬಸವಣ್ಣನವರು ಮತ್ತು ಶಿವಶರಣರು ದಾಂಪತ್ಯದ ಶ್ರೇಷ್ಠತೆಯನ್ನು ಹೇಗೆ ತಿಳಿಸಿದ್ದಾರೆ ಎಂಬುದರ ಕೆಲವು ಮುಖ್ಯಾಂಶಗಳು ಇಲ್ಲಿವೆ.

**ಕಾಯಕ ಮತ್ತು ಗೃಹಸ್ಥಾಶ್ರಮ**

ಸಾಂಪ್ರದಾಯಿಕ ಧರ್ಮಗಳು ಸಂಸಾರವನ್ನು ಮಾಯೆ ಅಥವಾ ಬಂಧನವೆಂದು ಕರೆದರೆ, ವಚನಕಾರರು ಗೃಹಸ್ಥ ಜೀವನವೇ ಧರ್ಮದ ನಿಜವಾದ ಪ್ರಯೋಗಶಾಲೆ ಎಂದು ಪ್ರತಿಪಾದಿಸಿದ್ದಾರೆ. ದಂಪತಿಗಳು ಒಟ್ಟಾಗಿ "ಕಾಯಕವೇ ಕೈಲಾಸ" ಎಂಬ ತತ್ವವನ್ನು ಅರಿತು ಕಾಯಕ ಮಾಡಬೇಕು. ಕಾಯಕದಿಂದ ಬಂದ ಆದಾಯದಲ್ಲಿ ದಾಸೋಹವನ್ನು ಆಚರಿಸಬೇಕು. ಸಂಸಾರವು ಕೇವಲ ಸ್ವಾರ್ಥಕ್ಕಾಗಿ ಇರದೆ, ಶಿವಪಥದ ಸಾಧನೆಗೆ ಅಡಿಪಾಯವಾಗಿರಬೇಕು ಹಾಗೂ ಸಮಾಜದ ಹಿತಕ್ಕಾಗಿ ನಡೆಯಬೇಕು.

ಶರಣರ ದಾಂಪತ್ಯವು ಕೇವಲ ಲೌಕಿಕ ಮಟ್ಟದಲ್ಲಿ ಮಾತ್ರ ನಿಲ್ಲದೆ, ಆಧ್ಯಾತ್ಮಿಕ ಹಂತಕ್ಕೂ ಏರುತ್ತದೆ. ತಾವು ಸತಿ–ಪತಿಗಳೆಂಬ ಭಾವ ಸಂಪೂರ್ಣವಾಗಿ ಇಲ್ಲವಾಗಿ, "ಶರಣ ಸತಿ – ಲಿಂಗ ಪತಿ" ಎಂಬ ಭಾವನೆ ಅವರಲ್ಲಿ ಅಳವಡುತ್ತದೆ. ಇಲ್ಲಿ ಇಬ್ಬರೂ ಲಿಂಗಪತಿಯ ಸತಿಯರಾಗಿ ತಮ್ಮನ್ನು ಭಾವಿಸುತ್ತಾರೆ. ಇದು ಶರಣ ದಂಪತಿಗಳು ಸಾಧಿಸಬೇಕಾದ ಪರಮಾವಸ್ಥೆಯಾಗಿದೆ. ಇದನ್ನು ಪ್ರಭುದೇವರ ವಚನವು ಹೀಗೆ ತಿಳಿಸುತ್ತದೆ:

***"ಸತಿ ಪತಿಯೆಂಬ ಅಂಗಸುಖ ಹಿಂಗಿ,***
***ಲಿಂಗವೇ ಪತಿಯಾದ ಬಳಿಕ***
***ಸತಿಗೆ ಪತಿಯುಂಟೆ? ಪತಿಗೆ ಸತಿಯುಂಟೆ?***
***ಪಾಲುಂಡು ಮತ್ತೆ ಮೇಲುಂಬರೆ, ಗುಹೇಶ್ವರ."***

ಈ ರೀತಿಯಾಗಿ ಶರಣರು ದಾಂಪತ್ಯವನ್ನು ಕೇವಲ ದೈಹಿಕ ಅಥವಾ ಸಾಮಾಜಿಕ ಸಂಬಂಧವಾಗಿ ಕಾಣದೆ, ಆಧ್ಯಾತ್ಮಿಕ ಐಕ್ಯದ ಸಾಧನೆಯಾಗಿ ಸ್ವೀಕರಿಸಿದ್ದಾರೆ. ದಾಂಪತ್ಯ ಧರ್ಮವನ್ನು ಒಪ್ಪಿಕೊಂಡ ಶರಣರು ಸಂಸಾರ ಹಾಗೂ ಸಮಾಜದಲ್ಲಿ ನೈತಿಕತೆ, ಶಾಂತಿ ಮತ್ತು ನೆಮ್ಮದಿಯನ್ನು ಸ್ಥಾಪಿಸಲು ಮುಂದಾಗಿದ್ದಾರೆ.

**ಸತಿಪತಿಗಳ ಸಮಾನತೆ ಮತ್ತು ಪರಸ್ಪರ ಗೌರವ**

ವಚನ ಚಳುವಳಿಯು ಸ್ತ್ರೀ–ಪುರುಷ ಸಮಾನತೆಗೆ ನಾಂದಿ ಹಾಡಿತು. ದಾಂಪತ್ಯದಲ್ಲಿ ಒಬ್ಬರು ಮತ್ತೊಬ್ಬರ ಯಜಮಾನರಲ್ಲ; ಇಬ್ಬರೂ ಸಮಾನರು ಎಂಬ ಭಾವನೆಯನ್ನು ಶರಣರು ಪ್ರತಿಪಾದಿಸಿದರು. ಶತಶತಮಾನಗಳಿಂದ ಸಾಹಿತ್ಯ ರಚನೆಯು ಕೇವಲ ಪುರುಷರ ಹಕ್ಕು ಎಂಬ ಸ್ಥಾಪಿತ ಕಲ್ಪನೆಯನ್ನು ವಚನ ಚಳುವಳಿ ಸುಳ್ಳಾಗಿಸಿತು. ಸಾಹಿತ್ಯ ಕ್ಷೇತ್ರದಿಂದ ಸಂಪೂರ್ಣವಾಗಿ ವಂಚಿತಳಾಗಿದ್ದ ಮಹಿಳೆಗೆ ಸಮಾನ ಅವಕಾಶ ದೊರೆಯಿತು. ಸತಿ–ಪತಿಗಳಿಬ್ಬರೂ ಒಂದೇ ವೇದಿಕೆಯಲ್ಲಿ ತಮ್ಮ ಆಧ್ಯಾತ್ಮಿಕ ಅನುಭವಗಳನ್ನು ವಚನಗಳ ಮೂಲಕ ಸಮರ್ಥವಾಗಿ ಅಭಿವ್ಯಕ್ತಪಡಿಸಿದರು. ಅವಕಾಶ ದೊರೆತರೆ ಮಹಿಳೆಯೂ ಅತ್ಯುನ್ನತ ಸಾಹಿತ್ಯವನ್ನು ಸೃಷ್ಟಿಸಬಲ್ಲಳು ಎಂಬುದನ್ನು ಅಕ್ಕಮಹಾದೇವಿ ಸೇರಿದಂತೆ ಅನೇಕ ಶರಣೆಯರು ಸಾಬೀತುಪಡಿಸಿದರು. ಹೆಂಡತಿಯನ್ನು ಕೇವಲ ಭೋಗದ ವಸ್ತುವಾಗಿ ನೋಡದೆ, ಆತ್ಮಸಂಗಾತಿಯಾಗಿ ಹಾಗೂ ಆಧ್ಯಾತ್ಮಿಕ ಸಹಯಾತ್ರಿಯಾಗಿ ಗೌರವಿಸಲಾಯಿತು.

**ದಾಂಪತ್ಯ ಧರ್ಮ ಶ್ರೇಷ್ಠವಾದುದು**

ಬಸವಣ್ಣವರು ಪತಿ–ಪತ್ನಿಯರ ನಡುವಿನ ಸಾಮರಸ್ಯ, ನಿಷ್ಠೆ ಮತ್ತು ಸದಾಚಾರ ಹೇಗಿರಬೇಕು ಎಂಬುದನ್ನು ಒಂದು ಸುಂದರ ವಚನದಲ್ಲಿ ಹೀಗೆ ಹೇಳಿದ್ದಾರೆ:

***"ಅತ್ತಿತ್ತ ಹೋಗದ ನಡಿವಡೆ ಲಿಂಗಪಿನ್ನಬೇಕು,***
***ಮತ್ತೊಂದು ಸತಿಯ ನಯನವಿಟ್ಟು ನೋಡದಡೆ***
***ಭಕ್ತನೆನ್ನಬೇಕು.***
***ತನ್ನ ಸತಿಗೆ ತಾನು ಪತಿಯಾಗಬೇಕು,***
***ಅನ್ಯ ಸತಿಯರೆಲ್ಲರೂ ತನಗೆ ತಾಯಿ–***
***ತಂಗಿಯರಾಗಬೇಕು.***

***ಇಂತಹ ಸದಾಚಾರವುಳ್ಳವರ ನೆರೆದಡೆ ಕೂಡಲಸಂಗಮದೇವನಿರುವನು."***

ಈ ವಚನದಲ್ಲಿ ಬಸವಣ್ಣವರು ಪರಸ್ತ್ರೀಯರನ್ನು ತಾಯಿ ಅಥವಾ ತಂಗಿಯರಂತೆ ಗೌರವದಿಂದ ಕಾಣಬೇಕು ಎಂಬ ಉನ್ನತ ನೈತಿಕ ಮೌಲ್ಯವನ್ನು ಪ್ರತಿಪಾದಿಸಿದ್ದಾರೆ. ದಾಂಪತ್ಯ ಜೀವನದಲ್ಲಿ ಪರಸ್ಪರ ನಿಷ್ಠೆ, ಗೌರವ ಮತ್ತು ವಿಶ್ವಾಸಕ್ಕೆ ಅವರು ವಿಶೇಷ ಮಹತ್ವ ನೀಡಿದ್ದಾರೆ. ಹೀಗೆ ಶರಣರು ನಾರಿಯನ್ನು ಗೌರವಯುತ ವ್ಯಕ್ತಿತ್ವವಾಗಿ ಕಂಡು, ಅವಳಲ್ಲಿ ದೈವತ್ವವನ್ನು ಕಾಣುವ ಪವಿತ್ರ ಭಾವನೆಯನ್ನು ಬೆಳೆಸುವ ಮೂಲಕ ಸಮಾಜದಲ್ಲಿ ಮಹಿಳೆಯ ಸ್ಥಾನಮಾನವನ್ನು ಉನ್ನತೀಕರಿಸಿದರು.

ದಾಂಪತ್ಯ ಜೀವನ ಸತ್ಯ ಶುದ್ದವಾಗಿರಬೇಕು ಸತಿಪತಿಗಳ ಅಂತರಂಗ ಬಹಿರಂಗ ಏಕವಾಗಿ ಅವರ ಆಚಾರ ವಿಚಾರಗಳಲ್ಲಿ ತಾದ್ಯತ್ಮತೋರಬೇಕು ಹಾಗಿದ್ದರೆ ಮಾತ್ರ ಕೌಟುಂಬಿಕ ನೆಮ್ಮದಿ ಸಾಧ್ಯ ವಿಷಮ ದಾಂಪತ್ಯ ಅಮೃತದಲ್ಲಿ ವಿಷಬೆರೆಸಿದಂತೆ ಭಿನ್ನ ಧರ್ಮ ಭಿನ್ನ ಭಕ್ತಿ ಸಲ್ಲವು ದಂಪತಿ ಏಕಭಾವ ಮತ್ತು ಸತಿಪತಿಗಳೊಂದಾದ ಭಕ್ತಿ ಮಾತ್ರ ಶಿವನಿಗೆ ಹಿತವೆನಿಸುತ್ತದೆ ಎಂದು ಹೇಳುವುದರ ಮೂಲಕ ಶರಣರು ಸುಖೀ ದಾಂಪತ್ಯಕ್ಕೆ ಕರೆಕೊಟ್ಟರು.

***ಗಂಡ ಹೆಂಡಿರ ಮನಸ್ಸು ಒಂದಾಗಿದ್ದರೆ***
***ದೇವರ ಮುಂದೆ ನಂದಾದೀವಿಗೆಯ ಮುಡಿಸಿದ ಹಾಗೆ***
***ಉಭಯ ದೃಷ್ಟಿ ಏಕಭಾವವಾಗಿ ನಿಂದಲ್ಲಿ***
***ಗುಹೇಶ್ವರ ಲಿಂಗಕ್ಕೆ ಅರ್ಪಿತವಾಯಿತ್ತು.***

ಹೀಗೆ ಜೇಡರ ದಾಸಿಮಯ್ಯ ಅಂಬಿಗರ ಚೌಡಯ್ಯ ಮತ್ತು ಪ್ರಭುದೇವರ ವಚನಗಳು ದಂಪತಿ ಏಕಭಕ್ತಿಯ ನಿಲುವನ್ನು ತಿಳಿಸುತ್ತವೆ.

**ಶರಣ ದಾಂಪತ್ಯದ ಆದರ್ಶ ಜೋಡಿಗಳು**

ವಚನ ಚಳುವಳಿಯ ಕಾಲದಲ್ಲಿ ಆದರ್ಶ ದಾಂಪತ್ಯ ಜೀವನಕ್ಕೆ ಅನೇಕ ಉತ್ತಮ ಉದಾಹರಣೆಗಳು ದೊರೆಯುತ್ತವೆ. ಅವುಗಳಲ್ಲಿ ಆಯ್ದಕ್ಕಿ ಮಾರಯ್ಯ–ಲಕ್ಕಮ್ಮ, ಮೋಳಿಗೆ ಮಾರಯ್ಯ–ಮಹಾದೇವಮ್ಮ ಹಾಗೂ ಬಸವಣ್ಣ–ನೀಲಾಂಬಿಕೆ ದಂಪತಿಗಳು ಪ್ರಮುಖರು. ಈ ದಂಪತಿಗಳ ಜೀವನವು ದಾಂಪತ್ಯ ಧರ್ಮ, ಕಾಯಕನಿಷ್ಠೆ, ದಾಸೋಹ, ಆಧ್ಯಾತ್ಮಿಕ ಸಾಧನೆ ಹಾಗೂ ಪರಸ್ಪರ ಗೌರವದ ಶ್ರೇಷ್ಠ ಮಾದರಿಯಾಗಿದೆ.

**ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮ**

ದಾಂಪತ್ಯ ಧರ್ಮ ಮತ್ತು ತಾತ್ವಿಕ ಜೀವನದ ಸಮನ್ವಯವನ್ನು ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮ ದಂಪತಿಗಳಲ್ಲಿ ಕಾಣಬಹುದು. ಸಂಸಾರದಲ್ಲಿ ಬಡತನವಿದ್ದರೂ, ಬಡತನದಿಂದ ಉಂಟಾಗುವ ಉಡುಗೆ–ಉಂಬಳಿಕೆಯ ಚಿಂತೆ ಅವರಿಗೆ ಇರಲಿಲ್ಲ. ಅಂತಹ ಚಿಂತೆಗಳೇ ಇಲ್ಲದ ಕಾರಣ ಇತರ ಯಾವುದೇ ಲೌಕಿಕ ವಿಷಯಗಳು ಅವರ ಮನಸ್ಸನ್ನು ಕಾಡಲಿಲ್ಲ. ಆಶ್ಚರ್ಯಕರ ಸಂಗತಿಯೆಂದರೆ, ಮಾರಯ್ಯನ ಕಾಯಕವೆಂದರೆ ಶರಣರ ಅಂಗಳದಲ್ಲಿ ಚೆಲ್ಲಿಹೋದ ಅಕ್ಕಿಯನ್ನು ಆಯ್ದು ತರುವುದು. ಈ ಕಾರಣದಿಂದಲೇ ಅವರಿಗೆ "ಆಯ್ದಕ್ಕಿ ಮಾರಯ್ಯ" ಎಂಬ ಹೆಸರು ಬಂದಿದೆ. ಕಾಯಕದ ಮೇಲಿನ ಅವರ ನಿಷ್ಠೆ ಅಪರೂಪದ್ದಾಗಿತ್ತು.

ಮಾರಯ್ಯನವರು ಕಾಯಕದ ಮಹತ್ವವನ್ನು ತಮ್ಮ ವಚನದಲ್ಲಿ ಹೀಗೆ ವ್ಯಕ್ತಪಡಿಸುತ್ತಾರೆ:

***ಕಾಯಕದಲ್ಲಿ ನಿರತನಾದರೆ***
***ಗುರುದರ್ಶನವಾದರೂ ಮರೆಯಬೇಕು,***
***ಲಿಂಗಪೂಜೆಯಾದರೂ ಮರೆಯಬೇಕು,***
***ಜಂಗಮ ಮುಂದಿದ್ದರೂ ಹಂಗು ಹರಿಯಬೇಕು;***
***ಕಾಯಕವೇ ಕೈಲಾಸವಾದ ಕಾರಣ,***
***ಅಮರೇಶ್ವರ ಲಿಂಗವಾಯಿತ್ತಾದುದು ಕಾಯಕದೊಳಗು.***

ಒಮ್ಮೆ ಅನುಭವ ಮಂಟಪದಲ್ಲಿ ಕಾಯಕದ ಕುರಿತು ಚರ್ಚೆಯಲ್ಲಿ ತಲ್ಲೀನನಾದ ಮಾರಯ್ಯ ಕಾಯಕದ ಸಮಯವನ್ನೇ ಮರೆತುಬಿಟ್ಟನು. ಇದನ್ನು

ಗಮನಿಸಿದ ಲಕ್ಕಮ್ಮ, "ಮಾತು ಮನಿ ಕಾಣದು, ತೂತುಗರಡಿ ನೀರು ಕಾಣದು" ಎಂಬ ಅನುಭವವನ್ನು ನೆನಪಿಸಿ, ಕಾಯಕಕ್ಕೆ ಸಮಯವಾಗಿದೆ ಎಂದು ಪತಿಯನ್ನು ಎಚ್ಚರಿಸಿ ಕಳುಹಿಸುತ್ತಾಳೆ. ಈ ಘಟನೆಯು ಅವಳ ಕಾಯಕನಿಷ್ಠೆಯನ್ನು ಸ್ಪಷ್ಟವಾಗಿ ತೋರಿಸುತ್ತದೆ.

ಲಕ್ಕಮ್ಮನ ಮಾತನ್ನು ಕೇಳಿದ ಮಾರಯ್ಯ ಅಂದು ಸ್ವಲ್ಪ ಆತುರದಿಂದಲೇ ಕಾಯಕಕ್ಕೆ ತೆರಳಿ, ಎಂದಿಗಿಂತ ಹೆಚ್ಚು ಅಕ್ಕಿಯನ್ನು ಸಂಗ್ರಹಿಸಿ ಮನೆಗೆ ತರುತ್ತಾನೆ. ಅದನ್ನು ಗಮನಿಸಿದ ಲಕ್ಕಮ್ಮ, "ಈ ಅಕ್ಕಿಯಾಸೆ ನಿಮಗೇಕೆ?" ಎಂದು ಪ್ರಶ್ನಿಸುತ್ತಾಳೆ. ಕಾಯಕವೆಂದರೆ ದುರಾಸೆಯಿಂದ ಮಾಡುವ ದುಡಿಮೆಯಲ್ಲ; ದೇಹಕ್ಕೆ ಅಗತ್ಯವಾದಷ್ಟನ್ನು ಸತ್ಯ ಮತ್ತು ಶುದ್ಧ ಮಾರ್ಗದಲ್ಲಿ ಸಂಪಾದಿಸಿ, ಅದನ್ನು ಹಂಚಿ ಉಣ್ಣುವುದೇ ನಿಜವಾದ ಆಧ್ಯಾತ್ಮಿಕ ಸಾಧನೆ ಎಂದು ಅವಳು ತಿಳಿಸುತ್ತಾಳೆ. ಅವಳು ಹೀಗೆ ಹೇಳುತ್ತಾಳೆ:

*"ಲಿಂಗಕ್ಕೆ ಬಡತನವೆಲ್ಲಿದೆ?*
*ಮನಕ್ಕೆ ಬಡತನವುಂಟೆ?*
*ಘನ ಶಿವಭಕ್ತನಿಗೆ ಬಡತನವಿಲ್ಲ."*

ಮುಂದೆ ಅವಳು, ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡಿಗೆ ಕಾರಣವಾಗುತ್ತದೆ ಎಂದು ಎಚ್ಚರಿಸುತ್ತಾಳೆ. ಅಗತ್ಯಕ್ಕಿಂತ ಹೆಚ್ಚು ಅಕ್ಕಿಯನ್ನು ತರುವುದು ಕಾಯಕ ಮಾರ್ಗಕ್ಕೆ ವಿರುದ್ಧವಾಗಿದೆ. ಆದ್ದರಿಂದ, "ಇದು ಅಮರೇಶ್ವರ ಲಿಂಗಕ್ಕೆ ಸಲ್ಲದ ಬೋನ; ಅದನ್ನು ಅಲ್ಲಿಯೇ ಸುರಿದು ಬನ್ನಿ" ಎಂದು ಮಾರಯ್ಯನಿಗೆ ಸಲಹೆ ನೀಡುತ್ತಾಳೆ.

ಕಾಯಕದಲ್ಲಿ ನಿಷ್ಠೆಯಿದ್ದಂತೆ, ಆಧ್ಯಾತ್ಮಿಕ ಮಾರ್ಗದಲ್ಲಿಯೂ ಲಕ್ಕಮ್ಮ ತನ್ನ ಪತಿಗೆ ಮಾರ್ಗದರ್ಶನ ನೀಡಬಲ್ಲ ಸಾಧಕಿಯಾಗಿದ್ದಾಳೆ. "ಎನಗೆ ಅರಿವು ಕರಿಗೊಂಬ ಅರಿವೆಲ್ಲಿ, ಅಮರೇಶ್ವರ ಲಿಂಗದಲ್ಲಿ ಹೇಳಾ?" ಎಂಬ ಮಾರಯ್ಯನ ಪ್ರಶ್ನೆಗೆ ಲಕ್ಕಮ್ಮ ನೀಡುವ ಉತ್ತರ ಅವಳ ಆಧ್ಯಾತ್ಮಿಕ ಪ್ರೌಢಿಮೆಯನ್ನು ಸ್ಪಷ್ಟಪಡಿಸುತ್ತದೆ.

*ಮಾಡುವ ಮಾತವುಳ್ಳನಕ್ಕ,*
*ಬೇರೊಂದು ಪದವನರಸಲೇತಕ್ಕೆ?*
*ದಾಸೋಹವೆಂಬ ಸೇವೆಯ ಬಿಟ್ಟು,*
*ನೀಸಲಾರದೆ ಕೈಲಾಸವೆಂಬ ಆಸೆ ಬೇಡ.*
*ಮಾರಯ್ಯಪ್ರಿಯ ಅಮರೇಶ್ವರ ಲಿಂಗವಿದ್ದ ಠಾವೇ ಕೈಲಾಸ.*

ನನಗೂ ನಿನಗೂ ಮಾರಯ್ಯಪ್ರಿಯ ಅಮರೇಶ್ವರ ಲಿಂಗವನರಿಯುವುದಕ್ಕೆ ಬೇರೊಂದು ಠಾವುಂಟೆ, ಮಾರಯ್ಯ?

ಲಕ್ಕಮ್ಮನ ಪ್ರಕಾರ, ಪ್ರತಿಷ್ಠಾಪಿಸಿದ ಮೂರ್ತಿಗೆ ಉಳಿಯ ಏಟಿನಿಂದ ರೂಪ ಸಿಗಬಹುದು; ಆದರೆ ಸ್ವಯಂಭೂ ಲಿಂಗದಲ್ಲಿ ಸಾಮರಸ್ಯವನ್ನು ಅರಿಯಲು ಬೇರೆ ಸ್ಥಳದ ಅವಶ್ಯಕತೆ ಇಲ್ಲ. ನಾವು ಇರುವ ಸ್ಥಳವೇ ಸಾಧನೆಯ ನೆಲೆಯಾಗಬೇಕು. ಸತಿ–ಪತಿ ಎಂಬ ಹೆಸರು ಮಾತ್ರ ಉಳಿದು, ಇಬ್ಬರ ಅರಿವು ಒಂದಾಗುವ ಸ್ಥಿತಿಯೇ ನಿಜವಾದ ಸಾಮರಸ್ಯ. ಈ ಮಾತುಗಳಲ್ಲಿ ವ್ಯಕ್ತವಾಗುವ ಲಕ್ಕಮ್ಮನ ಆಧ್ಯಾತ್ಮಿಕ ನಿಲುವು ಅತ್ಯಂತ ಉನ್ನತವಾದದ್ದು ಹಾಗೂ ಆಶ್ಚರ್ಯಕರವಾಗಿದೆ.

ಪ್ರಭುದೇವರು, ಬಸವಣ್ಣ ಸೇರಿದಂತೆ ಸಕಲ ಪ್ರಮಥರು ನೇಮ–ನಿತ್ಯ, ಜಂಗಮ–ಲಿಂಗ ಮೊದಲಾದ ಸರ್ವಸಮೂಹಗಳಿಗೆ ತ್ರಿಕರಣ ಶುದ್ಧಿಯಿಂದ ಸೇವೆ ಸಲ್ಲಿಸಿ, ಭಾವಭ್ರಮೆಯನ್ನು ಮೀರಿ, ಜೀವವಿಕಾರಗಳನ್ನು ತೊರೆದು ಅಮರೇಶ್ವರ ಲಿಂಗದಲ್ಲಿ ಐಕ್ಯರಾದರೆಂದು ವಚನಗಳು ತಿಳಿಸುತ್ತವೆ. ಈ ಪುಣ್ಯದಂಪತಿಗಳ ಐಕ್ಯತೆಯ ನಿಲುವು ಶರಣರ ದಾಂಪತ್ಯ ಜೀವನದ ಆದರ್ಶವನ್ನು ಚಿರಂತನವಾಗಿ ಸಾರುತ್ತದೆ.

ಕಾಯಕದ ಕುರಿತು ಈ ದಂಪತಿಗಳು ಬೆಳೆಸಿಕೊಂಡಿದ್ದ ಕಾಳಜಿ ಅನುಕರಣೀಯವಾಗಿದೆ. ಕಾಯಕದ ಮೂಲಕ ಸಂಪಾದಿಸಿದ ಸಂಪತ್ತಿನಲ್ಲಿ ದಾಸೋಹವನ್ನು ಮಾಡಬೇಕು; ಆದರೆ ಕಾಯಕದಲ್ಲಿ ದುರಾಸೆ ಇರಬಾರದು. ಮನಸ್ಸು ಎರಡಾಗಬಾರದು;

ಹಾಗೆ ಎರಡಾಗುವ ಮುನ್ನವೇ ಅದನ್ನು ಲಿಂಗಕ್ಕೆ ಅರ್ಪಿಸಬೇಕು ಎಂಬ ಸಂದೇಶವನ್ನು ಅವರು ನೀಡುತ್ತಾರೆ. ಈ ತತ್ವವು ಅಂದಿನ ಸಮಾಜಕ್ಕೆ ಎಷ್ಟು ಪ್ರಸ್ತುತವಾಗಿತ್ತೋ, ಇಂದಿಗೂ ಅಷ್ಟೇ ಪ್ರಸ್ತುತವಾಗಿದೆ.

**ಮೋಳಿಗೆ ಮಾರಯ್ಯ ಮತ್ತು ಮಹಾದೇವಮ್ಮ**

ಮೋಳಿಗೆ ಮಾರಯ್ಯ ಮತ್ತು ಮಹಾದೇವಮ್ಮರ ದಾಂಪತ್ಯ ಧರ್ಮವು ಆದರ್ಶಮಯ ಹಾಗೂ ಅಪರೂಪದ್ದಾಗಿದೆ. ರಾಜವೈಭವವನ್ನು ಧಿಕ್ಕರಿಸಿ ಬಂದವರಿಗೆ ಪರರ ದ್ರವ್ಯದ ಮೇಲೆ ವ್ಯಾಮೋಹ ಉಂಟಾಗುವುದು ಸಾಧ್ಯವೇ ಇಲ್ಲ ಎಂಬುದನ್ನು ಅವರ ಜೀವನ ಸ್ಪಷ್ಟಪಡಿಸುತ್ತದೆ. ಕಾಶ್ಮೀರದ ರಾಜನಾಗಿದ್ದ ಮಾರಯ್ಯನು ಬಸವಣ್ಣನವರ ಕಾಯಕ ತತ್ವಕ್ಕೆ ಮನಸೋತು ರಾಜ್ಯವನ್ನು ತ್ಯಜಿಸಿ ಕಲ್ಯಾಣಕ್ಕೆ ಬಂದನೆಂದು ತಿಳಿದುಬರುತ್ತದೆ. ಅಲ್ಲಿಗೆ ಬಂದ ನಂತರ ಕಟ್ಟಿಗೆಯ ಹೊರೆಯನ್ನು ಹೊತ್ತು ಮಾರುವ ಕಾಯಕವನ್ನು ಕೈಗೊಂಡು "ಮೋಳಿಗೆ ಮಾರಯ್ಯ" ಎಂದು ಪ್ರಸಿದ್ಧನಾದನು.

ಮಹಾರಾಣಿಯಾಗಿದ್ದ ಮಹಾದೇವಮ್ಮ ಕೂಡ ಪತಿಯನ್ನು ಅನುಸರಿಸಿ, ಅವನ ಸಾಧನೆಗೆ ಸಹಕಾರಿಯಾಗಿದ್ದಳು. ತಾನೂ ಆಧ್ಯಾತ್ಮಿಕ ಮಾರ್ಗದಲ್ಲಿ ನಡೆದು ಮಹಾ ಶರಣೆಯಾಗಿ ರೂಪುಗೊಂಡಳು. ಈ ದಂಪತಿಗಳ ಕಾಯಕನಿಷ್ಠೆ ಮತ್ತು ಜಂಗಮಾರ್ಚನೆಗಳು ಕಲ್ಯಾಣದ ಸಮಾಜಕ್ಕೆ ಆದರ್ಶವಾಗಿದ್ದವು.

ಮಾರಯ್ಯನ ಕಾಯಕವನ್ನು ಕುರಿತು ಚನ್ನಬಸವಣ್ಣನವರು ಹೀಗೆ ವರ್ಣಿಸುತ್ತಾರೆ:

***ಹಸಿವು, ತೃಷೆ ಮೊದಲಾದ ಕರ್ಮತರುಗಳನ್ನು ತೃಪ್ತಿಯೆಂಬ ಕೊಡಲಿಯಿಂದ ಕಡಿದು, ಕಾಮ–ಕ್ರೋಧಾದಿಗಳನ್ನು ತುಂಡುಮಾಡಿ, ಪಂಚೇಂದ್ರಿಯ ಗಳನ್ನೂ ಅಷ್ಟಮದಗಳನ್ನೂ ಒಂದೆಡೆ ಕಟ್ಟಿ, ಏಳು ಕಟ್ಟಿನ ಮೋಳಿಗೆಯನ್ನು ಕಟ್ಟುವವನೇ ಮೋಳಿಗೆ ಮಾರಯ್ಯ. ಅಂತಹ ಮಹಾಶರಣರ ಶ್ರೀಪಾದಗಳಿಗೆ ನಮೋ ನಮಃ.***

ಮಾರಯ್ಯನು ಲಿಂಗೈಕ್ಯವನ್ನು ಹಂಬಲಿಸಿ ಹೀಗೆ ಪ್ರಾರ್ಥಿಸುತ್ತಾನೆ:

***"ನಾ ಕಟ್ಟಿಗೆಯ ಹೊತ್ತು ಶಿವಭಕ್ತರ ಮನೆಗೆ ನೀವು ಕೊಟ್ಟ ಕಾಯಕದ ಕೃತ್ಯವನ್ನು ಇನ್ನೆಷ್ಟು ದಿನ ಮಾಡಲಿ, ಹೇಳಾ ನೀಃಕಳಂಕ ಮಲ್ಲಿಕಾರ್ಜುನಾ?"***

ಮುಂದೆ, ಕಾಯಕದ ಮಿತಿಯನ್ನು ಮೀರಿ ಶಿವನಲ್ಲಿ ಕೂಟಸ್ಥನಾಗುವ ಹಂಬಲವನ್ನು ವ್ಯಕ್ತಪಡಿಸುತ್ತಾ, ಶಕ್ತಿ–ಅಶಕ್ತಿ, ಲೇಪ–ನಿರ್ಲೇಪ, ರಾಗ–ವಿರಾಗಗಳನ್ನು ಮೀರಿ ಜ್ಞಾನಸಿಂಧುವಿನಲ್ಲಿ ಲೀನಗೊಳಿಸುವಂತೆ ಭಾವವೇಶದಿಂದ ಪ್ರಾರ್ಥಿಸುತ್ತಾನೆ.

ಪತಿಯ ಈ ಹಂಬಲವನ್ನು ಕಂಡ ಮಹಾದೇವಮ್ಮ ಅವನಿಗೆ ಅತ್ಯಂತ ಗಂಭೀರವಾದ ಆಧ್ಯಾತ್ಮಿಕ ಉಪದೇಶ ನೀಡುತ್ತಾಳೆ. ಅವಳು ಹೀಗೆ ಪ್ರಶ್ನಿಸುತ್ತಾಳೆ: ***"ಇಂದು ನೀನು ಐಕ್ಯನಾಗಬೇಕೆಂದು ಬಯಸುತ್ತಿದ್ದರೆ, ಇದುವರೆಗೆ ನೀನು ಏನಾಗಿದ್ದೆ?"*** ರಾಜ್ಯತ್ಯಾಗದ ನೆನಪನ್ನೇ ಸಾಧನೆ ಎಂದು ಭಾವಿಸುವುದು ಮೋಹವೆಂದು ತಿಳಿಸುತ್ತಾಳೆ. ನಿಜವಾದ ಭಕ್ತಿ ಕೊಟ್ಟು–ತೆಗೆದುಕೊಳ್ಳುವ ವ್ಯವಹಾರವಲ್ಲ; ಭಕ್ತಿಯಲ್ಲಿ ಭಿನ್ನಭಾವ ಇರಬಾರದು ಎಂದು ಬೋಧಿಸುತ್ತಾಳೆ.

ಶಿವನನ್ನು ತನಗಿಂತ ಪ್ರತ್ಯೇಕವಾಗಿ ಕಾಣುವ ದ್ವೈತಭಾವವನ್ನು ಬಿಟ್ಟು, ಕಿಚ್ಚು ತಗುಲಿದ ಕರ್ಪೂರದಂತೆ ಕ್ರಮೇಣ ಅಹಂಕಾರ ಕರಗಿದಾಗಲೇ ಸಾಮರಸ್ಯದ ಸುಖ ದೊರೆಯುತ್ತದೆ ಎಂದು ಮಹಾದೇವಮ್ಮ ವಿವರಿಸುತ್ತಾಳೆ. ಈ ಮೂಲಕ ಲಿಂಗಾಂಗ ಸಾಮರಸ್ಯದ ಸೂಕ್ಷ್ಮ ತತ್ವವನ್ನು ಅವಳು ಅತ್ಯಂತ ಸರಳವಾಗಿ ನಿರೂಪಿಸುತ್ತಾಳೆ.

ಮುಂದೆ, ನಿತ್ಯ–ಅನಿತ್ಯಗಳ ವಿವೇಕವನ್ನು ಅರಿತುಕೊಂಡ ನಂತರವೂ ಕೈಲಾಸವನ್ನು ಹೊರಗಡೆ ಹುಡುಕುವುದು, ಬೆಳಕನ್ನು ಕೈಯಲ್ಲಿ ಹಿಡಿದು ಕತ್ತಲೆಯನ್ನು ಹುಡುಕುವಂತೆಯೇ ಆಗುತ್ತದೆ ಎಂದು ಮಹಾದೇವಮ್ಮ ಹೇಳುತ್ತಾಳೆ. ಬಯಲಿನ ಬೆಳಕನ್ನು ನಮ್ಮೊಳಗೇ ಕಂಡುಕೊಳ್ಳಬೇಕು ಎಂಬ ಅವಳ

ಉಪದೇಶವು ಮಾರಯ್ಯನ ಮನಸ್ಸಿನ ತಾತ್ಕಾಲಿಕ ಗೊಂದಲವನ್ನು ನಿವಾರಿಸಿ ಆಧ್ಯಾತ್ಮಿಕ ಅರಿವನ್ನು ಜಾಗೃತಗೊಳಿಸುತ್ತದೆ.

ಪತ್ನಿಯ ಆಧ್ಯಾತ್ಮಿಕ ಪ್ರೌಢಿಮೆಯನ್ನು ಕಂಡು ಮಾರಯ್ಯನು ಅವಳನ್ನೇ ತನ್ನ ಮಾರ್ಗದರ್ಶಕಳಾಗಿ ಸ್ವೀಕರಿಸಿ, ತನ್ನ ಸಂದೇಹವನ್ನು ವಿನಯದಿಂದ ಕೇಳುತ್ತಾನೆ:

***"ಎನ್ನ ಸತ್ಯಕ್ಕೆ, ಎನ್ನ ಭಕ್ತಿಗೆ, ಎನ್ನ ಮನಕ್ಕೆ, ಎನ್ನ ನಿಶ್ಚಯಕ್ಕೆ ಬಂದು ನೀಃಕಳಂಕ ಮಲ್ಲಿಕಾರ್ಜುನನು ಎಲ್ಲಿದ್ದಾನೆಂದು ತಿಳಿಸು."***

ಅದಕ್ಕೆ ಮಹಾದೇವಮ್ಮ ವಿನಯದಿಂದ ಉತ್ತರಿಸುತ್ತಾಳೆ:

***"ದೇಹವಿದ್ದಂತೆ ತಲೆ ನಡೆಯಬಹುದೇ? ಕಣ್ಣು ನೋಡಬಲ್ಲುದೇ? ಕಿವಿ ಕೇಳಬಲ್ಲುದೇ? ನಿಮ್ಮ ಸೇವೆಯ ತೋಳಾದ ನಾನು ನಿಮಗೆ ಹೊಸದಾಗಿ ಏನು ಹೇಳಬಲ್ಲೆ? ನೀವೇ ನಿಮ್ಮೊಳಗಿನ ಲಿಂಗ ಸ್ವರೂಪವನ್ನು ಅರಿತುಕೊಳ್ಳಬೇಕು."***

ನಿನ್ನೊಳಗಿನ ಬೆಳಕನ್ನು ನೀನೇ ಅರಿಯಬೇಕು. ಲಿಂಗಾಂಗ ಸಾಮರಸ್ಯದ ಅನುಪಮ ಸುಖವು ಕರ್ಮಬಂಧನವನ್ನು ದಾಟಿ ಶಿವಯೋಗದ ರಹಸ್ಯವನ್ನು ಅರಿತಾಗ ಮಾತ್ರ ದೊರೆಯುತ್ತದೆ ಎಂದು ಅವಳು ತಿಳಿಸುತ್ತಾಳೆ.

ಮಾರಯ್ಯನು ಈ ಮಾತುಗಳನ್ನು ಒಪ್ಪಿಕೊಂಡು ತನ್ನ ಪತ್ನಿಗೆ ಹೀಗೆ ಕೃತಜ್ಞತೆ ಸಲ್ಲಿಸುತ್ತಾನೆ:

***"ಎನ್ನ ಭಕ್ತಿಗೆ ನೀ ಶಕ್ತಿಯಾದೆ; ಎನ್ನ ಸತ್ಯಕ್ಕೆ ನೀ ಸತಿಯಾದೆ. ನನ್ನ ಸುಖ–ದುಃಖಗಳಿಗೆ ನೀ ಅನ್ಯಳಲ್ಲ. ನನ್ನ ಸಾಧನೆಯ ಶಕ್ತಿ ಕುಂದಿದಾಗ ಅದಕ್ಕೆ ಆಸರೆಯಾಗಿ ಬಂದವಳು ನೀನು."***

ಇದಾದ ನಂತರ ಮಹಾದೇವಮ್ಮ ತನ್ನ ವಿನಯ, ಸಾಧಕತ್ವ ಮತ್ತು ಆಧ್ಯಾತ್ಮಿಕ ಪ್ರೌಢಿಮೆಯಿಂದ ಮಾರಯ್ಯನ ಸಾಧನೆಗೆ ನಿರಂತರ ಬೆಂಬಲವಾಗುತ್ತಾಳೆ. ಅನೇಕ ವಚನಗಳಲ್ಲಿ ಅವಳು ಭಕ್ತಿ, ಸಾಮರಸ್ಯ ಮತ್ತು ನಿರ್ಲೇಪತೆಯ ತತ್ವವನ್ನು ವಿವರಿಸುತ್ತಾಳೆ. ಭಕ್ತಿ ವಸ್ತುವಿನಲ್ಲಿ ಸಂಪೂರ್ಣವಾಗಿ ಲೀನವಾದಾಗ ನಿರ್ಲೇಪ ಸ್ಥಿತಿಯನ್ನು ಹೊಂದ ಬಹುದು ಎಂಬುದನ್ನು ಅವರ ಅನುಭವ ಸ್ಪಷ್ಟಪಡಿಸುತ್ತದೆ.

ಪ್ರಭುದೇವರು ಮತ್ತು ಬಸವಣ್ಣರ ವ್ಯಕ್ತಿತ್ವದ ಪ್ರಭಾವವೇ ಮಾರಯ್ಯರಂತಹ ಶರಣರನ್ನು ಹಾಗೂ ಲಕ್ಕಮ್ಮ, ಮಹಾದೇವಮ್ಮರಂತಹ ಶರಣೆಯರನ್ನು ರೂಪಿಸಿತು ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗುವುದಿಲ್ಲ.

**ಬಸವಣ್ಣ ಮತ್ತು ನೀಲಾಂಬಿಕೆ (ನೀಲಮ್ಮ)**

ಬಸವಣ್ಣನವರ ಜೀವನದಲ್ಲಿ ನೀಲಾಂಬಿಕೆಯವರ (ನೀಲಮ್ಮ) ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂಬುದನ್ನು ವಚನ ಸಾಹಿತ್ಯ ಹಾಗೂ ಇತರ ಕಾವ್ಯ ಸಾಹಿತ್ಯಗಳು ಸ್ಪಷ್ಟಪಡಿಸುತ್ತವೆ. ಸಾಮಾಜಿಕ ಸುಧಾರಣೆ ಮತ್ತು ಧಾರ್ಮಿಕ ಜಾಗೃತಿಯ ಮಹಾಯಜ್ಞವನ್ನು ಹೊತ್ತ ಬಸವಣ್ಣನವರಿಗೆ ನೀಲಾಂಬಿಕೆಯವರು ನಿಜವಾದ ಸಹಧರ್ಮಿಣಿಯಾಗಿ, ಅವರ ಚಿಂತನೆ ಮತ್ತು ಕಾರ್ಯಗಳಿಗೆ ಬೆಂಬಲವಾಗಿ ಜೀವನಪಥದಲ್ಲಿ ಜೊತೆಯಾಗಿ ಸಾಗಿದರು.

ಬಸವಣ್ಣನವರ ಜೀವನದಲ್ಲಿ ಮಹತ್ವದ ಪಾತ್ರ ವಹಿಸಿದ ನೀಲಾಂಬಿಕೆಯವರು 'ಸಂಗಯ್ಯ' ಅಂಕಿತದಲ್ಲಿ ವಚನಗಳು, ಸ್ವರ ವಚನಗಳು ಹಾಗೂ ಕಾಲಜ್ಞಾನಗಳನ್ನು ರಚಿಸಿದ್ದಾರೆ. ಅವರ ಬಹುತೇಕ ವಚನಗಳು ಬಸವಣ್ಣನವರ ವ್ಯಕ್ತಿತ್ವ, ಆಧ್ಯಾತ್ಮಿಕ ಮಹಿಮೆ ಹಾಗೂ ಅವರ ಅಗಲಿಕೆಯ ವಿರಹವನ್ನು ಅಭಿವ್ಯಕ್ತಿಸುತ್ತವೆ.

***ಏಕೆನ್ನ ಪುಟ್ಟಿಸಿದೆಯಯ್ಯ ಹೆಣ್ಣು ಜನ್ಮದಲ್ಲಿ,***
***ಪುಣ್ಯವಿಲ್ಲದ ಪಾಪಿಯ.***
***ಎನ್ನ ನಾಮ ಹೆಣ್ಣು ನಾಮವಲ್ಲಯ್ಯ,***
***ನಾನು ಸಿರಿಯಿದ್ದ ವಸ್ತುವಿನ ವಧುವಾದ ಕಾರಣ;***
***ಸಂಗಯ್ಯನಲ್ಲಿ ಬಸವನ ವಧುವಾದ ಕಾರಣ,***
***ಎನಗೆ ಹೆಣ್ಣು ನಾಮವಿಲ್ಲವಯ್ಯ.***

ಈ ವಚನವು **"ಶರಣ ಸತಿ – ಲಿಂಗ ಪತಿ"** ಎಂಬ ಭಾವನೆಯನ್ನು ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ. ಲೌಕಿಕವಾಗಿ ನೀಲಾಂಬಿಕೆಯವರು ಬಸವಣ್ಣನವರ ಪತ್ನಿಯಾಗಿದ್ದರೂ, ಆಧ್ಯಾತ್ಮಿಕವಾಗಿ ತಾವು ಸಂಗಯ್ಯನ ಸತಿಯಾಗಿರುವ ಭಾವವನ್ನು ವ್ಯಕ್ತಪಡಿಸುತ್ತಾರೆ. ಇದು ಶರಣರ ದಾಂಪತ್ಯದಲ್ಲಿ ಲೌಕಿಕ ಸಂಬಂಧಕ್ಕಿಂತ ಆಧ್ಯಾತ್ಮಿಕ ಸಂಬಂಧವೇ ಶ್ರೇಷ್ಠವೆಂಬ ತತ್ವವನ್ನು ಸಾರುತ್ತದೆ.

***"ಪಾರ್ವತಿಯ ರೂಪ ಕಂಡು ಪರಶಿವನ ಸಂಗ ನಿಸ್ಸಂಗವಾಗಿ,***
***ತಾಯಿ–ಮಗನಸಂಗದಿಂದ ತನುವಳಿದು ನಿರಾಭಾರ ರೂಪವನೆಯ್ದಿ,***
***ಬಸವನ ಅನುಭವದಿಂದ ವಿವರವ ಕಂಡು***
***ವಿಚಾರ ಪತ್ನಿಯಾದೆನಯ್ಯ ಸಂಗಯ್ಯ."***

ಈ ವಚನದಲ್ಲಿ **"ವಿಚಾರ ಪತ್ನಿ"** ಎಂಬ ಪರಿಕಲ್ಪನೆ ಅತ್ಯಂತ ವಿಶಿಷ್ಟವಾಗಿದೆ. ಹೆಂಡತಿಯು ಗಂಡನಿಗೆ ಕೇವಲ ಜೀವನ ಸಂಗಾತಿಯಾಗಿರದೆ, ವಿಚಾರಸಂಗಾತಿ ಹಾಗೂ ಆಧ್ಯಾತ್ಮಿಕ ಸಹಯಾತ್ರಿಯಾಗಿರಬೇಕು ಎಂಬ ಸಂದೇಶವನ್ನು ನೀಲಾಂಬಿಕೆಯವರು ನೀಡಿದ್ದಾರೆ. ಇದು ಜಾಗತಿಕ ಸಾಹಿತ್ಯದಲ್ಲಿಯೇ ಅಪರೂಪದ ಮತ್ತು ಉನ್ನತವಾದ ದಾಂಪತ್ಯ ದೃಷ್ಟಿಕೋನವಾಗಿದೆ.

ಅವರ ವಚನಗಳಲ್ಲಿ ಬರುವ ***"ಮಾತಿನ ಹಂಗೇತಕ್ಕೆ ಮನವೇ ಕಾಂತದಲ್ಲಿ ನಿಂದ ಬಳಿಕ, ಮಾತಿನ ಸೂತಕ ಹಿಂಗಿ ಮನೋಲಯವಾಯಿತ್ತಯ್ಯ ಸಂಗಯ್ಯ"*** ಎಂಬಂತಹ ಸಾಲುಗಳು ಅವರ ಆಧ್ಯಾತ್ಮಿಕ ಅನುಭವದ ಆಳವನ್ನು ಪ್ರತಿಬಿಂಬಿಸುತ್ತವೆ. ಕಲ್ಯಾಣದ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಬಸವಣ್ಣನವರ ಸಾಮೂಹಿಕ ಕ್ರಾಂತಿಗೆ ಬೆನ್ನೆಲುಬಾಗಿ ನಿಂತ ಆದರ್ಶ ಸಹಧರ್ಮಿಣಿಯಾಗಿ ನೀಲಾಂಬಿಕೆಯವರು ಗುರುತಿಸಿಕೊಂಡಿದ್ದಾರೆ.

ಬಸವಣ್ಣನವರು ಕಲ್ಯಾಣವನ್ನು ತೊರೆದು ಕೂಡಲಸಂಗಮಕ್ಕೆ ತೆರಳಿದ ಸಂದರ್ಭದಲ್ಲಿ, ನೀಲಾಂಬಿಕೆಯನ್ನು ಕರೆತರಲು ಹಡಪದ ಅಪ್ಪಣ್ಣನನ್ನು ಕಳುಹಿಸಿದರೆಂದು ಪರಂಪರೆಯಲ್ಲಿ ಉಲ್ಲೇಖವಿದೆ. ಆದರೆ ನೀಲಾಂಬಿಕೆಯವರು ತಮಗೆ **"ಅಲ್ಲಿ–ಇಲ್ಲಿ"** ಎಂಬ ದ್ವಂದ್ವವೇ ಇಲ್ಲ ಎಂದು ತಿಳಿಸುತ್ತಾರೆ. ಬಸವಣ್ಣನು ದೈಹಿಕವಾಗಿ ದೂರವಿದ್ದರೂ, ಅಂತರಂಗದಲ್ಲಿ ಸದಾ ಲಿಂಗಸ್ವರೂಪಿಯಾಗಿ ತಮ್ಮೊಂದಿಗಿದ್ದಾನೆ ಎಂಬ ಆಧ್ಯಾತ್ಮಿಕ ಅನುಭವವನ್ನು ಅವರು ವ್ಯಕ್ತಪಡಿಸುತ್ತಾರೆ. ಆದ್ದರಿಂದ ಭೌತಿಕ ಸಂಗಮಕ್ಕಿಂತ ಆತ್ಮೀಯ ಸಂಗಮವೇ ಶ್ರೇಷ್ಠ ಎಂಬ ಸಂದೇಶವನ್ನು ನೀಡುತ್ತಾರೆ.

ಈ ವಿಷಯವನ್ನು ಹಡಪದ ಅಪ್ಪಣ್ಣನು ಬಸವರಾಜದೇವರಿಗೆ ತಿಳಿಸಿದಾಗ, ಅವರು ಸಂಗಮೇಶ್ವರ ಗುರುಮೂರ್ತಿಯ ಹೃದಯಕಮಲದಲ್ಲಿ ವಿಶ್ರಾಂತಿ ಪಡೆದ ಗುರುತತ್ವವನ್ನು ವಿವರಿಸಿ, ನೀಲಾಂಬಿಕೆಯವರ ಆಧ್ಯಾತ್ಮಿಕ ಸ್ಥಿತಿಯನ್ನು ಗೌರವಿಸುತ್ತಾರೆ.

ನೀಲಮ್ಮನಿಗೆ ಬಸವಣ್ಣನೇ ಗುರು. ಲಿಂಗದಲ್ಲಿ ಗುರುವನ್ನು ಕಾಣುವ ಅರಿವನ್ನು ನೀಡಿದವರೂ ಬಸವಣ್ಣನೇ. ಆದರೆ ಬಸವಣ್ಣನವರ ಲಿಂಗೈಕ್ಯದ ಸುದ್ದಿ ಕೇಳಿದ ನಂತರ, ತಮಗೂ ಈ ದೇಹದಲ್ಲಿ ಉಳಿಯುವ ಆಸಕ್ತಿ ಇಲ್ಲವೆಂದು ಅವರು ವಿರಹಭರಿತವಾಗಿ ವಚನಗಳಲ್ಲಿ ವ್ಯಕ್ತಪಡಿಸುತ್ತಾರೆ. ಅಡವಿಯಲ್ಲಿ ಕಂಗೆಟ್ಟ ಪಶುವಿನಂತೆ ಅವರು ಪ್ರಲಾಪಿಸಿ, ಕೊನೆಗೆ ತಮ್ಮ ಕರಸ್ಥಲದ ಲಿಂಗದಲ್ಲಿ ಒಂದಾಗುವ ಸಂಕಲ್ಪವನ್ನು ವ್ಯಕ್ತಪಡಿಸುತ್ತಾರೆ.

ಹೀಗೆ ಬಸವಣ್ಣನವರ ಪತ್ನಿಯಾಗಿ, ಶರಣ ಸಮುದಾಯದ ತಾಯಿಯಾಗಿ ಹಾಗೂ ಆದರ್ಶ ಸಹಧರ್ಮಿಣಿಯಾಗಿ ಬದುಕಿದ ನೀಲಾಂಬಿಕೆಯವರ ಜೀವನವು ಶರಣ ದಾಂಪತ್ಯದ ಅತ್ಯುನ್ನತ ಮಾದರಿಯಾಗಿದೆ.

ಇವರಷ್ಟೇ ಅಲ್ಲದೆ, ಕಲ್ಯಾಣ ಕ್ರಾಂತಿಯಲ್ಲಿ ಪಾಲ್ಗೊಂಡ ಹರಳಯ್ಯ–ಕಲ್ಯಾಣಮ್ಮ, ಉರಿಲಿಂಗಪೆದ್ದಿ–ಕಾಳವ್ವ, ನಾಗಿದೇವಯ್ಯ–ಮಸಣಮ್ಮ, ಕಾಟಕೂಟಯ್ಯ–ರೇಚವ್ವ, ಮಂಚಣ್ಣ–ಲಕ್ಷಮ್ಮ, ಗುಂಡಯ್ಯ–ಕೇತಲದೇವಿ, ದಸರಯ್ಯ–ವೀರಮ್ಮ, ಭಾಚಿಕಾಯಕದ ಬಸವಯ್ಯ–ಕಾಳವ್ವ, ರೇವಣ್ಣ ಸಿದ್ದಯ್ಯ–ರೇಕಮ್ಮ, ಸಿದ್ದಬುದ್ದಯ್ಯ–ಕಾಳವ್ವ ಹಾಗೂ ಹಡಪದ ಅಪ್ಪಣ್ಣ–ಲಿಂಗಮ್ಮ ಮೊದಲಾದ ಅನೇಕ ಶರಣ ದಂಪತಿಗಳು ಲೌಕಿಕ ಜೀವನದಲ್ಲಷ್ಟೇ ಅಲ್ಲದೆ, ಆಧ್ಯಾತ್ಮಿಕ ಜೀವನದಲ್ಲಿಯೂ ಆದರ್ಶವನ್ನು ಸ್ಥಾಪಿಸಿದ್ದಾರೆ.

ದಾಂಪತ್ಯ ಧರ್ಮವನ್ನು ಅಂಗೀಕರಿಸಿದ ಶರಣರು ಅದಕ್ಕೆ ಮಾರಕವಾದ ವೇಶ್ಯಾವೃತ್ತಿಯನ್ನು ತೀವ್ರವಾಗಿ ವಿರೋಧಿಸಿದರು. ಪ್ರಾಚೀನ ಕಾಲದಿಂದ ನಡೆದು ಬಂದ ಈ ಅನಿಷ್ಟ ಪದ್ಧತಿಯನ್ನು ನಿರ್ಮೂಲನೆ ಮಾಡಿ, ಸಂಸಾರ ಮತ್ತು ಸಮಾಜದಲ್ಲಿ ನೈತಿಕತೆ ಹಾಗೂ ನೆಮ್ಮದಿಯನ್ನು ಸ್ಥಾಪಿಸಲು ಪ್ರಯತ್ನಿಸಿದರು. ಆದ್ದರಿಂದಲೇ ವೇಶ್ಯಾಗಮನವನ್ನು ಅವರು ಕಟುವಾಗಿ ಟೀಕಿಸಿದರು. ಇದು ಅವರ ಸಾಮಾಜಿಕ ಕಳಕಳಿಯ ಪ್ರತೀಕವಾಗಿದೆ.

ಶರಣರು ದಾಂಪತ್ಯದಲ್ಲಿ ಸಾಮರಸ್ಯ, ಪಾವಿತ್ರ್ಯ ಮತ್ತು ನಿಷ್ಠೆಯನ್ನು ಬೋಧಿಸಿದರು. ಜ್ಞಾನೋದಯ ವಾದ ನಂತರವೂ ಸಂಸಾರವನ್ನು ತ್ಯಜಿಸದೆ, ಅದನ್ನು ಧರ್ಮಪರವಾಗಿ ನಿರ್ವಹಿಸಬೇಕೆಂದು ಅವರು ಉಪದೇಶಿಸಿದರು. ಕೇದಾರಗುರುವಿನ ಈ ವಚನವು ಅದನ್ನು ಸ್ಪಷ್ಟಪಡಿಸುತ್ತದೆ:

***"ನಿಜವರಿತ ಬಳಿಕ ಸಂಸಾರ ಬಿಡಬೇಕೋ?***
***ನಿಜವರಿತ ಬಳಿಕ ಅಂಗೀಕರಿಸಿದ ಹೆಣ್ಣನ್ನು ಬಿಟ್ಟರೆ***
***ಅಘೋರ ನರಕದಲ್ಲಿಕ್ಕುವನು."***

ಈ ಎಲ್ಲ ವಿಚಾರಗಳಿಗೆ ನಿದರ್ಶನವಾಗಿ ಶರಣರೆಲ್ಲರೂ ಆದರ್ಶ ಸಂಸಾರಿಗಳಾಗಿ, ಅನ್ಯೋನ್ಯ ದಾಂಪತ್ಯ ಜೀವನವನ್ನು ನಡೆಸಿದರು. ಸತಿಪತಿಗಳಾಗಿ ಒಂದಾಗಿ ಶಿವನಿಗೆ ಪ್ರಿಯವಾದ ಭಕ್ತಿಯನ್ನು ಅರ್ಪಿಸಿದರು.

ಹೀಗೆ, ಹನ್ನೆರಡನೇ ಶತಮಾನದಲ್ಲಿ ನಡೆದ ಕಲ್ಯಾಣ ಕ್ರಾಂತಿಯಲ್ಲಿ ಶರಣ ಸಮೂಹವು ಆಧ್ಯಾತ್ಮಿಕ ಕ್ರಾಂತಿಯ ಜೊತೆಗೆ ಆದರ್ಶ ದಾಂಪತ್ಯ ಜೀವನದ ಮಾದರಿಯನ್ನೂ ನಿರ್ಮಿಸಿತು. ಸತಿಪತಿ ಭಾವ, ಪರಸ್ಪರ ಗೌರವ, ಸಮಾನತೆ ಹಾಗೂ ಆತ್ಮಾನುಭವದ ನೆಲೆಯಲ್ಲಿ ವಚನಗಳನ್ನು ರಚಿಸಿ, ಇಂದಿಗೂ ಪ್ರಸ್ತುತವಾಗಿರುವ ಮಾನವೀಯ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಸಮಾಜಕ್ಕೆ ನೀಡುವ ಮೂಲಕ ತಮ್ಮ ಜೀವನವನ್ನು ಸಾರ್ಥಕಗೊಳಿಸಿದರು.

**ಪರಾಮರ್ಶನ ಗ್ರಂಥಗಳು**


- ಬಸವರಾಜು, ಎಲ್. (2016.). ಸರಳ ಶೂನ್ಯ ಸಂಪಾದನೆ. ಸಪ್ನ ಬುಕ್‌ಹೌಸ್.
- ಗಿರಡ್ಡಿ, ಗೋವಿಂದರಾಜು. (ಸಂ.) (2004). ಶೂನ್ಯ ಸಂಪಾದನೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು
- ಕಲಬುರ್ಗಿ, ಎಂ.ಎಂ. (ಸಂ.) (2001). *ಬಸವಣ್ಣನವರ ವಚನ ಸಂಪುಟ.* ಕನ್ನಡ ಪುಸ್ತಕ ಪ್ರಾಧಿಕಾರ.
- ತಿಪ್ಪೇರುದ್ರಸ್ವಾಮಿ,ಎಚ್.ಎಸ್. (ಸಂ.) (2016.). *ಶೂನ್ಯ ಸಂಪಾದನೆ.* ಡಿವಿಕೆ ಮೂರ್ತಿ ಪ್ರಕಾಶನ
- ವೀರಣ್ಣ ರಾಜೂರ. (ಸಂ.) (2001). *ಶಿವಶರಣೆಯರ ವಚನ ಸಂಪುಟ.* ಶಿವಶರಣೆಯರ ವಚನ ಸಂಪುಟ. ಕನ್ನಡ ಪುಸ್ತಕ ಪ್ರಾಧಿಕಾರ.